JUNE 05, 2025

# AKASHAVANI - DHARWAD
## PRADESH SAMACHARA (KANNADA) 12.00 P.M.

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**1.** ರೇಲ್ವೆ ನಿಲ್ದಾಣಗಳ ಟಿಕೆಟ್ ಕೌಂಟರ್‌ನಲ್ಲಿ, ಜನದಟ್ಟಣೆ ನಿಯಂತ್ರಿಸಲು, ನೈಋತ್ಯ ರೇಲ್ವೆ ವಿಭಾಗ, ಹುಬ್ಬಳ್ಳಿಯ ಶ್ರೀ ಸಿದ್ಧಾರೂಢ ಸ್ವಾಮಿ ರೈಲು ನಿಲ್ದಾಣದಲ್ಲಿ ಅಳವಡಿಸಿದ್ದ, ಸ್ವಯಂಚಾಲಿತ ಟಿಕೆಟ್ ವಿತರಣಾ ಯಂತ್ರ – ಎ.ಟಿ.ವಿ.ಎಮ್. ಈಗ ವಿವಿಧ ನಗರಗಳ ರೈಲು ನಿಲ್ದಾಣಗಳಿಗೂ ವಿಸ್ತರಿಸಿದೆ. ಡಿಜಿಟಲ್ ಟಿಕೆಟಿಂಗ್ ವ್ಯವಸ್ಥೆಯ ಭಾಗವಾಗಿ, ಹುಬ್ಬಳ್ಳಿ ರೈಲು ನಿಲ್ದಾಣದಲ್ಲಿ **8**, ಬೆಳಗಾವಿ, ಬಳ್ಳಾರಿಯಲ್ಲಿ ತಲಾ **3**, ಬಾಗಲಕೋಟೆ, ವಿಜಯಪುರ, ಗದಗ ಮತ್ತು ಹೊಸಪೇಟೆಯಲ್ಲಿ ತಲಾ **2**, ಧಾರವಾಡ, ಕೊಪ್ಪಳ ಮತ್ತು ಘಟಪ್ರಭಾದಲ್ಲಿ ತಲಾ ಒಂದರಂತೆ, ಒಟ್ಟು **25** ಟಿಕೆಟ್ ವಿತರಿಸುವ ಯಂತ್ರಗಳನ್ನು ಅಳವಡಿಸಿ, ಫೆಸಿಲಿಟೇಟರ್ ಸ್ಮಾರ್ಟ್ ಕಾರ್ಡ್ ಮೂಲಕ, ಕಾರ್ಯನಿರ್ವಹಿಸಲು, **31** ಜನ ಸಹಾಯಕರನ್ನು ನೇಮಿಸಲಾಗಿದೆ ಎಂದು, ನೈಋತ್ಯ ರೇಲ್ವೆ ತಿಳಿಸಿದೆ.

<><><>

**2.** ತತ್ಕಾಲ್ ರೇಲ್ವೆ ಟಿಕೆಟ್ ಅಕ್ರಮ ತಡೆಯಲು, ಈ ಮಾಸಾಂತ್ಯಕ್ಕೆ, ಇ–ಆಧಾರ್ ದೃಢೀಕರಣ ಕಡ್ಡಾಯ ಗೊಳಿಸಲಾಗುವುದು ಎಂದು, ಕೇಂದ್ರ ರೇಲ್ವೆ ಖಾತೆ ಸಚಿವ ಅಶ್ವಿನಿ ವೈಷ್ಣವ್, ಎಕ್ಸ್ ಮಾಧ್ಯಮದಲ್ಲಿ ತಿಳಿಸಿದ್ದಾರೆ. ತತ್ಕಾಲ್ ಟಿಕೆಟ್‌ನ್ನು ಅಕ್ರಮವಾಗಿ ಮುಂಗಡ ಬುಕ್ಕಿಂಗ್ ಮಾಡಿ, ದುಬಾರಿ ಬೆಲೆಗೆ ಪ್ರಯಾಣಿಕರಿಗೆ ಮಾರುವ ಜಾಲವನ್ನು, ತಡೆಯಲಾಗುವುದು, ಎಂದಿದ್ದಾರೆ.

<><><>

**3.** ರಾಜ್ಯದಲ್ಲಿ ಒಂದೇ ಬಾರಿಗೆ, **11** ಸಾವಿರ ಹಾಗೂ ಧಾರವಾಡ ಜಿಲ್ಲೆಯಲ್ಲಿ, **5** ಸಾವಿರ ಅನಧಿಕೃತ ಮನೆಗಳಿಗೆ, ಇ–ಸ್ವತ್ತು ಮಾಡಿಸಿ, ಅಧಿಕೃತ ಪಟ್ಟಾ ಅಧಿಕಾರ ಒದಗಿಸಿ, ರೈತರಿಗೆ, ಬಡ ಕೂಲಿ ಕಾರ್ಮಿಕರಿಗೆ, ಆಶ್ರಯ ನೀಡಲಾಗಿದೆ ಎಂದು, ಕಾರ್ಮಿಕ ಖಾತೆ ಸಚಿವ ಸಂತೋಷ ಲಾಡ ತಿಳಿಸಿದ್ದಾರೆ. ಧಾರವಾಡ ಜಿಲ್ಲೆ, ಕಲಘಟಗಿ ತಾಲೂಕು, ತಾವರಗೇರಿ ಗ್ರಾಮದಲ್ಲಿ, ಸರ್ಕಾರದ ವಿವಿಧ ಯೋಜನೆಗಳ ಫಲಾನುಭವಿಗಳಿಗೆ, ಹಲವು ಸೌಲಭ್ಯ ವಿತರಿಸಿ, ತಾವರಗೇರಿ ಗ್ರಾಮದಲ್ಲಿ, **118** ಜನರಿಗೆ ಇ–ಸ್ವತ್ತು ಕೈಗೊಂಡು, ಪಟ್ಟಾ ನೀಡಲಾಗಿದೆ, ಎಂದರು.

<><><>

**4.** ಜನ ಗಣತಿ **2027,** ಜೊತೆಗೆ ಜಾತಿ ಗಣತಿ ದಿನಾಂಕವನ್ನು, ಕೇಂದ್ರ ಸರ್ಕಾರ ಪ್ರಕಟಿಸಿದೆ. **2021** ರಲ್ಲಿ ಕೋವಿಡ್ ಕಾರಣದಿಂದ, ಮುಂದೂಡಲ್ಪಟ್ಟ ಜನ ಗಣತಿ, **16** ವರ್ಷಗಳ ಬಳಿಕ, ಕರ್ನಾಟಕ ಸೇರಿದಂತೆ, ಇತರೆ ರಾಜ್ಯಗಳಲ್ಲಿ, ಮಾರ್ಚ್ **1**ರಿಂದ ಪ್ರಥಮ ಹಂತದಲ್ಲಿ ಆರಂಭವಾಗಲಿದೆ. ಇದೇ **16** ರಂದು, ತತ್ಕಾಲಿಕ ಅಧಿಸೂಚನೆ ಪ್ರಕಟಗೊಳ್ಳಲಿದೆ ಎಂದು, ಕೇಂದ್ರ ಗೃಹ ಇಲಾಖೆ ತಿಳಿಸಿದೆ.

<><><>

**5.** ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ ಯೋಜನೆಯಡಿ, ಬೀದರ ಜಿಲ್ಲೆ, ಹಲಬರ್ಗಾ ಗ್ರಾಮದ, ಜನಶ್ರೀ ಮಹಿಳಾ ರೈತ ಉತ್ಪಾದಕರ ಕಂಪೆನಿ, ಮೊಟ್ಟ ಮೊದಲ ಬಾರಿಗೆ, ಬೀಜ, ರಸ ಗೊಬ್ಬರಗಳನ್ನು ರೈತರಿಗೆ ವಿತರಿಸುವ ಪರವಾನಿಗೆ ಪಡೆದ, ಹೆಗ್ಗಳಿಕೆಗೆ ಪಾತ್ರವಾಗಿದೆ. ರೈತ ಉತ್ಪಾದಕರ ಕಂಪೆನಿಯ, ಕೃಷಿಕ ಮಹಿಳಾ ಶೇರುದಾರಿಗೆ, ಜಿಲ್ಲಾ ಪಂಚಾಯ್ತಿ ಸಿ.ಇ.ಓ. ಗಿರೀಶ ಬದೋಲೆ, ಶೇರುಪತ್ರ ವಿತರಿಸಿ, ಅಭಿನಂದಿಸಿದರು.

<><><>

**6.** ರಾಜ್ಯದ ಪಂಚ ಖಾತ್ರಿ ಯೋಜನೆಗಳ ಅನುಷ್ಠಾನಕ್ಕಾಗಿ, ಪ್ರತಿ ವರ್ಷ **52** ಸಾವಿರ ಕೋಟಿ ರೂಪಾಯಿ ಖರ್ಚಿಸಿ, ಶೇಕಡ **98** ರಷ್ಟು ಗುರಿ ಸಾಧಿಸಿದ್ದು, ಜನತೆಗೆ ಸ್ವಾವಲಂಬಿ ಬದುಕನ್ನು ಕಟ್ಟಿಕೊಟ್ಟಿವೆ ಎಂದು, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ರಾಜ್ಯ ಉಪಾಧ್ಯಕ್ಷ ಎಸ್.ಆರ್.ಮೆಹರೋಜ್ ಖಾನ್ ತಿಳಿಸಿದ್ದಾರೆ. ಬೀದರ್ ಜಿಲ್ಲಾ ಪಂಚಾಯ್ತಿ ಸಭಾಂಗಣದಲ್ಲಿ, ಅವರು ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲಿಸಿದರು.

<><><>

**7.** 'ಹಸಿರು ಪಥ ಕಾರ್ಯಕ್ರಮ'ದಡಿ, ದಾವಣಗೆರೆ ಜಿಲ್ಲೆಯ ಮುಖ್ಯ ರಸ್ತೆ ಮತ್ತು ಗ್ರಾಮೀಣ ರಸ್ತೆಗಳ ಎರಡೂ ಬದಿಗಳಲ್ಲಿ, **113** ಕಿಲೋ ಮೀಟರ್ ದೂರದ ವರೆಗೆ, ಸಸಿ ನೆಡಲಾಗುವುದು ಎಂದು, ಜಿಲ್ಲಾ ಪಂಚಾಯ್ತಿ ಸಿ.ಇ.ಓ. ಸುರೇಶ್ ಇಟ್ನಾಳ್ ತಿಳಿಸಿದ್ದಾರೆ. ವಿಶ್ವ ಪರಿಸರ ದಿನಾಚರಣೆ ಹಿನ್ನೆಲೆ, ದಾವಣಗೆರೆಯಲ್ಲಿಂದು ಜನ ಜಾಗ್ರತಿ ಕಾರ್ಯಕ್ರಮದಲ್ಲಿ ಅವರು ಪಾಲ್ಗೊಂಡು, ಮಾತನಾಡಿದರು.

<><><>

ಸಿ.ಇ.ಓ. ಡಾ. ಸುರೇಶ ಇಟ್ನಾಳ್ ಧ್ವನಿ **35** ಸೆಕೆಂದುಗಳು

<><><>

**8.** ರಾಯಲ್ ಚಾಲೇಂಜರ್ಸ್ ಬೆಂಗಳೂರು, ಐ.ಪಿ.ಎಲ್. ಟ್ರೋಫಿ ಗೆದ್ದ ವಿಜಯೋತ್ಸವ ಸಂದರ್ಭದಲ್ಲಿ, ಬೆಂಗಳೂರಿನಲ್ಲಿ ನಡೆದ ನೂಕು, ನುಗ್ಗಲಿನಲ್ಲಿ, ಕೋಲಾರ ಚಿನ್ನದ ಗಣಿ ತಾಲೂಕಿನ, ಬಡಮಾಕನಹಳ್ಳಿ ಗ್ರಾಮದ, ಖಾಸಗಿ ಕಂಪೆನಿಯಲ್ಲಿ ಇಂಜಿನಿಯರ್ ಆಗಿದ್ದ, **24** ವರ್ಷದ ಸಹನಾ, ಚಿಕ್ಕಬಳ್ಳಾಪುರ ಜಿಲ್ಲೆ ಚಿಂತಾಮಣಿ ತಾಲೂಕು ಕುರುಟಹಳ್ಳಿ ಗ್ರಾಮದ, ದಂತ ವೈದ್ಯಕೀಯ ವಿದ್ಯಾರ್ಥಿ ಕೆ.ಟಿ.ಶ್ರವಣ್ ಹಾಗೂ ಗೋಪಲ್ಲಿ ಗ್ರಾಮದ ಪ್ರಜ್ವಲ್ ಮೃತದೇಹಗಳು ಸ್ವಗ್ರಾಮ ತಲುಪಿವೆ.

<><><>

**9.** ಬೆಂಗಳೂರು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ದುರಂತದ ಹಿನ್ನೆಲೆ, ಅರಮನೆ ಮೈದಾನದಲ್ಲಿ ಇಂದು ಆಯೋಜಿಸಲಾಗಿದ್ದ, ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮವನ್ನು, ಮುಂದೂಡಲಾಗಿದೆ ಎಂದು, ಮುಖ್ಯಮಂತ್ರಿ ತಿಳಿಸಿದ್ದಾರೆ.

<><><>

**10.** **ರಾಜ್ಯದಲ್ಲಿ ಮೊದಲ ಬಾರಿಗೆ, ಕೋಲಾರ ತಾಲೂಕು, ಸುಗಟೂರು ಹೋಬಳಿಯ, ಸೋಮಾಂಬುಧಿ ಅಗ್ರಹಾರ ಕೆರೆಯ ನೀರಿನ ಮೇಲೆ, ಸೌರ ಫಲಕ ಅಳವಡಿಸಿ, ವಿದ್ಯುತ್ ಉತ್ಪಾದಿಸಲು, ಸಣ್ಣ ನೀರಾವರಿ ಇಲಾಖೆಯಿಂದ ಟೆಂಡರ್ ಪ್ರಕ್ರಿಯೆ ಆರಂಭಿಸಲಾಗಿದೆ ಎಂದು, ಪ್ರಬಾರ ಕಾರ್ಯಪಾಲಕ ಅಭಿಯಂತರರು ತಿಳಿಸಿದ್ದಾರೆ.**

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.**